
# ಶ್ರೀ ಶ್ರೀಧರ ಚರಿತ್ರೆ

ಸಂತಶ್ರೇಷ್ಠ ಶ್ರೀಧರ ಸ್ವಾಮಿಗಳ ಜೀವನ ಚರಿತ್ರೆಯ ಕೆಲವು ಪುಸ್ತಕಗಳು ಈಗಾಗಲೇ ಪ್ರಕಟವಾಗಿವೆ. ಬಹಳ ಸುದೀರ್ಘವಾದ, ಸಾವಿರ ಪುಟಗಳಷ್ಟು ಬೃಹತ್ತಾದ ಒಂದು ಗ್ರಂಥವೂ ಸಾಕಷ್ಟು ಹಿಂದೆಯೇ ರಚಿತವಾಗಿದೆ. ಆದರೂ ಅಂತಹ ಮಹಾತ್ಮರ ಜೀವನ, ಉಪದೇಶಗಳನ್ನು ಕುರಿತಾದ ಹೊಸ ಪುಸ್ತಕಗಳ ರಚನೆಯ ಅಗತ್ಯ ಸಾಕಷ್ಟು ಇದೆ. ವಿವಿಧ ಬಗೆಯ ಓದುಗರಿಗೆ, ಅನೇಕ ರೀತಿಯಲ್ಲಿ ಅನುಕೂಲವಾಗುವಂತೆ ಬೇರೆ ಬೇರೆ ಗಾತ್ರದ, ವಿಭಿನ್ನ ರೂಪದ ಕೃತಿಗಳು ಹೊರಬಂದರೆ ಅವು ಸೂಕ್ತವಲ್ಲವೆ?

ಸಾಗರದ ಶ್ರೀ ಜಿ.ಟಿ. ಶ್ರೀಧರ ಶರ್ಮಾ ಹಾಗೂ ಶ್ರೀಮತಿ ಎಸ್. ರೋಹಿಣಿ ಶರ್ಮಾ ಅವರಿಂದ ರಚಿತವಾದ '**ಶ್ರೀ ಶ್ರೀಧರ ಚರಿತ್ರೆ**' ಎಂಬ ಕಿರು ಗಾತ್ರದ ಪುಸ್ತಿಕೆ (ಪಾಕೆಟ್ ಬುಕ್) ಹಲವು ವಿಧಗಳಲ್ಲಿ ಓದುಗರಿಗೆ ನೆರವಾಗಬಲ್ಲುದು. ಪ್ರಯಾಣ ಮಾಡುವಾಗ, ವಿವಿಧ ಕೆಲಸಗಳ ನಡುವೆ, ಪ್ರತಿದಿನ ನಿಗದಿತ ಸಮಯದಲ್ಲಿ ಓದುವವರಿಗೆ ಇಂತಹ ಸಣ್ಣ ಪುಸ್ತಕಗಳು ಸ್ಫೂರ್ತಿ ತುಂಬಬಲ್ಲವು. ವಿದ್ಯಾರ್ಥಿಗಳಿಗೂ, ಇತರ ಆಸಕ್ತ ಓದುಗರಿಗೂ ಸರಳವಾಗಿ ಓದಿಸಿಕೊಂಡು ಹೋಗುವ ನಿರೂಪಣೆ ಇಲ್ಲಿನದು. ಇದಕ್ಕೆ ಸಂಕ್ಷಿಪ್ತ ಮುನ್ನುಡಿಯನ್ನು ಬರೆದಿರುವ ಕೋಣನಕಟ್ಟೆಯ ಶ್ರೀ ರವೀಂದ್ರ ಶರ್ಮಾ ಅವರು ಹೀಗೆ ಹೇಳುತ್ತಾರೆ: ''ಈ ಪುಸ್ತಕವನ್ನು ಓದುತ್ತಾ ಓದುತ್ತಾ ಬಂದಂತೆ ಶ್ರೀಧರಸ್ವಾಮಿಗಳು ಇಲ್ಲಿಯೇ ಇರುವರು, ಅವರ ಜೊತೆ ಸಂಚರಿಸಿದಂತೆಯೇ ಭಾಸವಾಗುವುದು. ಅಷ್ಟು ಚೆನ್ನಾಗಿ ಓದಿಸಿಕೊಂಡು ಹೋಗುವುದು. ತಾರೀಖು, ತಿಂಗಳು, ಇಸವಿ ಹಾಕಿರುವುದಂತೂ ಅತ್ಯುಪಯುಕ್ತ. ಇಷ್ಟು ವರ್ಷಗಳ ಹಿಂದೆ ಶ್ರೀಧರ ಸ್ವಾಮಿಗಳು ಇಲ್ಲಿಗೆ ಬಂದಿದ್ದರು, ಹೀಗೆ ಅನುಗ್ರಹ ಮಾಡಿದ್ದರು ಇವೇ ಮುಂತಾದ ವಿಚಾರಗಳು ಮನಸ್ಸಿಗೆ ಮುದ ನೀಡುತ್ತವೆ. ಹೆಚ್ಚು ಹೆಚ್ಚು ಆವರ್ತಿ ಮಾಡುತ್ತಾ ಬಂದಲ್ಲಿ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಸಕಾರಾತ್ಮಕ ಬದಲಾವಣೆ ಆಗುವುದರಲ್ಲಿ ಸಂಶಯವಿಲ್ಲ.'' (ಪು.೧೬-೧೭)

ಶ್ರೀಧರ ಸ್ವಾಮಿಗಳ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ನೀಡುವುದರೊಂದಿಗೆ, ಅವರ ಶಿಷ್ಯಂದಿರ ಪರಿಚಯ, ಅವರ ಲೀಲಾ ಕ್ಷೇತ್ರಗಳ ವಿವರ, ಅವರ ಉಪದೇಶಗಳು ಮುಂತಾದ ಸಂಗತಿಗಳು ಈ ಪುಟ್ಟ ಕೃತಿಯಲ್ಲಿ ಸಾಕಷ್ಟು ಇವೆ. ಓದಿಗೆ ಹೆಚ್ಚು ಹೊರೆಯಲ್ಲದ, ಆದರೆ ಯಾವ ಮುಖ್ಯ ಅಂಶಗಳೂ ಬಿಟ್ಟುಹೋಗದ ಒಂದು ಅಪೂರ್ವ ಹದ ಇಲ್ಲಿದೆ. ಸಾತ್ತ್ವಿಕ ಓದುಗರೆಲ್ಲರಿಗೂ ಪ್ರಿಯವಾಗುವ ಹತ್ತಾರು ಘಟನೆಗಳು, ಮೌಲಿಕ ಅಂಶಗಳು ಇಲ್ಲಿವೆ. ದಿವ್ಯ ಸತ್ಸಂಗಕ್ಕೆ ಸದಾ ನೆರವಾಗಬಲ್ಲ ಉತ್ತಮ ಕೃತಿ ಇದಾಗಿದೆ.




**ಕೃತಿ:** ಶ್ರೀ ಶ್ರೀಧರ ಚರಿತ್ರೆ
**ಲೇಖಕರು :** ಜಿ.ಟಿ. ಶ್ರೀಧರ ಶರ್ಮಾ
ಎಸ್. ರೋಹಿಣಿ ಶರ್ಮಾ
**ಪ್ರಕಾಶನ :** ಭೂಮಿ, ನಾಹರ್ ಕಾಲೋನಿ, ಎಂ.ಪಿ. ಪ್ರಕಾಶನಗರ, ಹೊಸಪೇಟೆ-583201 ವಿಜಯನಗರ ಜಿಲ್ಲೆ
ಮೊ. 9448722800, 7019637741
**ಬೆಲೆ:** 100/- **ಪುಟ:** 222

*

## ಶಿವ ಮತ್ತು ಪಾರ್ವತಿ

ಶಿವಾರಾಧನೆಯು ಗಾಂಭೀರ್ಯ ಮತ್ತು ನಿಷ್ಠುರ ನಿಷ್ಠೆಗಳಿಗೆ ಹೆಸರಾದುದು. ಈ ಪೂಜೆಯು ಶಕ್ತಿಯ ಅಥವಾ ಕಾಳಿ, ದುರ್ಗಾ ಮೊದಲಾದ ಹೆಸರುಗಳಿಂದ ಪ್ರಸಿದ್ಧವಾದ ಮಾತೃದೇವತಾ ಪೂಜೆಗೆ ನಿಕಟ ಸಂವಾದಿಯಾಗಿದೆ. ಜನಪ್ರಿಯವಾಗಿರುವ ಹಿಂದೂಧರ್ಮದ ಸಾಂಕೇತಿಕ ಭಾಷೆಯಲ್ಲಿ ಶಕ್ತಿಯು ಶಿವನ ಹೆಂಡತಿ. ಅವರಿಬ್ಬರೂ ಅಖಂಡ ಬ್ರಹ್ಮಾಂಡದ ಜನನೀ-ಜನಕರೆಂದು ಭಾವಿಸಲಾಗಿದೆ. ಹೀಗೆ ಶಿವ-ಶಕ್ತಿಯರು ಜಗತ್ತಿನ ತಂದೆ ತಾಯಿಗಳೆಂಬ ಭಾವನೆಯು ಭಾರತದಲ್ಲಿರುವ ಕವಿ ದಾರ್ಶನಿಕರನ್ನೂ ಕಲಾವಿದ-ಅನುಭಾವಿಗಳನ್ನೂ ಸಂತ-ಭಕ್ತರನ್ನೂ ನೂರಾರು ವರ್ಷಗಳಿಂದ ಸ್ಫೂರ್ತಿಗೊಳಿಸುತ್ತಾ ಬಂದಿದೆ. ರಾಷ್ಟ್ರ ಮಹಾಕವಿ ಕಾಳಿದಾಸನು ತನ್ನ 'ರಘುವಂಶ ಮಹಾಕಾವ್ಯ'ದ ಮೊದಲ ಶ್ಲೋಕದಲ್ಲಿ ಅವರನ್ನು ''ಶಬ್ದ ಮತ್ತು ಅರ್ಥಗಳು ಹೇಗೋ ಹಾಗೆ, ಅವಿನಾಭಾವದಿಂದ ಕೂಡಿರುವ ಜಗದೀಶ್ವರನಾದ ಶಿವ ಮತ್ತು ದೇವಮಾತೆಯಾದ ಪಾರ್ವತಿ ಇವರನ್ನು ಶಬ್ದಾರ್ಥ ಪ್ರತಿಪತ್ತಿಗಾಗಿ ನಮಸ್ಕರಿಸುತ್ತೇನೆ'' ಎಂದು ಸ್ತೋತ್ರ ಮಾಡಿದ್ದಾನೆ.



ಪಾರ್ವತಿ ಎಂಬುದಕ್ಕೆ ಪರ್ವತನ ಅಂದರೆ ಹಿಮಾಲಯನ ಮಗಳು ಎಂದು ವಾಚ್ಯಾರ್ಥ. ಆಕೆಯ ದುರ್ಗಾ, ಗೌರೀ ಎಂಬ ಮತ್ತೆರಡು ಹೆಸರುಗಳೂ ಪರ್ವತ ಸಂಬಂಧದ ವಾಚಕಗಳೇ. ಶಿವ ಮತ್ತು ಪಾರ್ವತಿ ಅಥವಾ ಶಕ್ತಿಯರ ಮದುವೆ ಎಂಬುದು ಜಡವಾದ ಬ್ರಹ್ಮ ಮತ್ತು ಕ್ರಿಯಾತ್ಮಕವಾದ ಸೃಷ್ಟಿ ಶಕ್ತಿ-ಇವುಗಳ ಐಕ್ಯತೆಯ ಸಂಕೇತ.

— ಸ್ವಾಮಿ ರಂಗನಾಥಾನಂದ